28ಗಂಟೆಗಳ ಕಾರ್ಯಾಚರಣೆ •ಮತ್ತೆ ಬೆಂಕಿ ಕಾಣಿಸಿಕೊಳ್ಳುವ ಆತಂಕ •ಜನರೇ ಕಿಡಿ ಹಚ್ಚಿರುವ ಶಂಕೆ •ಸುಟ್ಟು ಕರಕಲಾದ 50 ಎಕರೆ ಪ್ರದೇಶ

# ಬೆಳ್ಳಂದೂರು ಕೆರೆ: ಆರಿದ ಬೆಂಕಿ, ನಿಲ್ಲದ ಹೊಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಂದೂರು ಕೆರೆಯಲ್ಲಿ ಶುಕ್ರವಾರ ಕಾಣಿಸಿಕೊಂಡಿದ್ದ ಬೆಂಕಿಯನ್ನು ಸತತ 28 ಗಂಟೆಗಳ ಕಾರ್ಯಾಚರಣೆ ಮೂಲಕ ಬಹುತೇಕ ನಂದಿಸಲಾಗಿದೆ. ಆದರೆ, ಅಲ್ಲಲ್ಲಿ ಕೆಲವು ಕಡೆ ಹೊಗೆ ಕಾಣಿಸಿಕೊಳ್ಳುತ್ತಿದೆ.

‘ಸದ್ಯ ಎಲ್ಲಾ ಬೆಂಕಿಯ ಜ್ವಾಲೆಗಳನ್ನು ಸಂಪೂರ್ಣ ನಂದಿಸಿದ್ದೇವೆ. ಆದರೂ ಹೊಗೆಯಾಡುತ್ತಿದೆ. ಅಲ್ಲಿ ಮತ್ತೆ ಬೆಂಕಿ ಕಾಣಿಸಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹೀಗಾಗಿ ಎರಡು ಅಗ್ನಿಶಾಮಕ ವಾಹನಗಳನ್ನು ಕೆರೆಯಂಚಿನಲ್ಲೇ ನಿಲ್ಲಿಸಿದ್ದೇವೆ. 10 ಸಿಬ್ಬಂದಿಯೂ ಸ್ಥಳದಲ್ಲೇ ಇರುತ್ತಾರೆ. ರಾತ್ರಿ ಏನಾದರೂ ಬೆಂಕಿ ಕಾಣಿಸಿಕೊಂಡರೆ ಪುನಃ ಕಾರ್ಯಾಚರಣೆ ಆರಂಭಿಸಲು ಸನ್ನದ್ಧರಾಗಿದ್ದೇವೆ’ ಎಂದು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ನಿರ್ದೇಶಕ ಕೆ.ಯು.ರಮೇಶ್ ‘ಪ್ರಜಾವಾಣಿ’ಗೆ ಹೇಳಿದರು.

**ಮಾನವ ನಿರ್ಮಿತ ಘಟನೆ:** ‘ಈ ಘಟನೆಯು ಮೇಲ್ನೋಟಕ್ಕೆ ಜನರೇ ನಡೆಸಿದ ಕೃತ್ಯದಂತೆ ಕಂಡುಬರುತ್ತಿದೆ. ಈ ಬಗ್ಗೆ ತನಿಖೆ ನಡೆಸಲಿದ್ದೇವೆ. ಸಮಗ್ರ ವರದಿ ಸಿದ್ಧಪಡಿಸಿ ಉನ್ನತ ಅಧಿಕಾರಿಗಳಿಗೆ ಕೊಡುತ್ತೇವೆ. ಬಳಿಕವೇ ನಿಖರ ಕಾರಣವನ್ನು ಬಹಿರಂಗಪಡಿಸಲಿದ್ದೇವೆ’ ಎಂದು ತಿಳಿಸಿದರು.

ಕೆರೆಯಂಚಿನ ಸುಮಾರು 70 ಎಕರೆ ಜಾಗದಲ್ಲಿ ಹೂಳು ತುಂಬಿಕೊಂಡಿದೆ. ಮನುಷ್ಯರು ಸರಾಗವಾಗಿ ಕೆರೆಯಲ್ಲೇ ನಡೆದುಕೊಂಡು ಒಂದು ದಡದಿಂದ ಮತ್ತೊಂದು ದಡಕ್ಕೆ ಹೋಗಬಹುದಾದ ಸ್ಥಿತಿ ಇದೆ. ಅದೇ ಹೂಳಾಗಿ ಮಾರ್ಪಾಡಾಗಿರುವ ತ್ಯಾಜ್ಯಕ್ಕೆ ಹೊತ್ತಿಕೊಂಡ ಬೆಂಕಿ, ಇಡೀ ಕೆರೆಯನ್ನೇ ಸುಟ್ಟಿದೆ.

ಶುಕ್ರವಾರ ಬೆಳಿಗ್ಗೆ 9.30 ಕೆರೆಯಲ್ಲಿ ಹೊಗೆ ಕಾಣಿಸಿಕೊಂಡಿತ್ತು. ಮಧ್ಯಾಹ್ನದ ವೇಳೆ ಬೆಂಕಿಯ ತೀವ್ರತೆ ಹೆಚ್ಚಾಗುತ್ತಿದ್ದಂತೆ ಕೆರೆ ಪಕ್ಕವೇ ಇದ್ದ ಸೇನೆಯ ಸಿಬ್ಬಂದಿಯು ಅಗ್ನಿಶಾಮಕ ದಳದ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು. ಮಧ್ಯಾಹ್ನ 12 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಕಾರ್ಯಾಚರಣೆ ಆರಂಭಿಸಿದ್ದರು. ಬೆಂಕಿಯ ರುದ್ರನರ್ತನ ಹೆಚ್ಚಿದ್ದರಿಂದ ಬಹುಬೇಗನೇ ನಿಯಂತ್ರಣಕ್ಕೆ ಬಂದಿರಲಿಲ್ಲ.

ಪ್ರಖರವಾದ ವಿದ್ಯುತ್ ದೀಪಗಳ ನೆರವಿನಿಂದ ರಾತ್ರಿ ಇಡೀ ಕಾರ್ಯಾಚರಣೆ ನಡೆಸಲಾಯಿತು. ಶನಿವಾರ ಬೆಳಿಗ್ಗೆ ಬೆಂಕಿಯು ಸ್ವಲ್ಪ ಹತೋಟಿಗೆ ಬಂತು ಎನ್ನುವಷ್ಟರಲ್ಲಿ ಪುನಃ ಬೆಂಕಿಯ ಜ್ವಾಲೆಗಳು ಒಂದೊಂದಾಗಿ ಕಾಣಿಸಿಕೊಳ್ಳುತ್ತಿದ್ದವು. ಬೆಳಿಗ್ಗೆ 10 ಗಂಟೆಗೆ ಕಾರ್ಯಾಚರಣೆ ಸ್ಥಗಿತಗೊಳಿಸಲು ಸಿದ್ಧತೆ ನಡೆಸಿದ್ದವು. ಅಷ್ಟರಲ್ಲಿ ಇನ್ನೊಂದು ಜಾಗದಲ್ಲಿ ಒಮ್ಮೆಲೆ ಬೆಂಕಿ ಧಗ ಧಗನೇ ಉರಿಯಲಾರಂಭಿಸಿತ್ತು. ಹಾಗಾಗಿ ಕಾರ್ಯಾಚರಣೆಯನ್ನು ಮುಂದುವರಿಸಲಾಯಿತು.

ನಗರದ ಎಲ್ಲ ಕಚೇರಿಯಿಂದ ಸಿಬ್ಬಂದಿಯನ್ನು ಕರೆಸಲಾಯಿತು. ಆರು ಮಂದಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳು, 10 ಜಿಲ್ಲಾ ಅಗ್ನಿಶಾಮಕ ಅಧಿಕಾರಿ, 76 ಸಿಬ್ಬಂದಿ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ 11 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.



**30** ಕೋಟಿ ಲೀ. ಪ್ರತಿ ದಿನ ಕೆರೆಗೆ ಸೇರುವ ಕೊಳಚೆ ನೀರಿನ ಪ್ರಮಾಣ

**20** ಕೋಟಿ ಲೀ. ನೀರನ್ನು ಶುದ್ಧೀಕರಿಸಲಾಗುತ್ತಿದೆ.

**9** ಕೋಟಿ ಲೀ. ಸಾಮರ್ಥ್ಯದ ಎಸ್‌ಟಿಪಿಯನ್ನು ಬೆಳ್ಳಂದೂರು–ಅಮಾನಿಕೆರೆ ಬಳಿ ಸ್ಥಾಪಿಸಲಾಗಿದೆ.

**6** ಕೋಟಿ ಲೀ. ಸಾಮರ್ಥ್ಯದ ಎಸ್‌ಟಿಪಿಯನ್ನು ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿ ನಿರ್ಮಿಸಲಾಗಿದೆ.

**5.5** ಕೋಟಿ ಲೀ. ಸಾಮರ್ಥ್ಯದ ಎಸ್‌ಟಿಪಿಗಳನ್ನು ಪುಟ್ಟೇನಹಳ್ಳಿ, ಹುಳಿಮಾವು, ಬೇಗೂರು, ಅಗರ ಕೆರೆಗಳಲ್ಲಿ ನಿರ್ಮಿಸಲಾಗುತ್ತಿದೆ.

**ಯಾವಾಗೆಲ್ಲ ಬೆಂಕಿ ಅವಘಡ ನಡೆದಿದೆ**

- 2015 ಮೇ 19 (ಅಮಾನಿ ಕೆರೆ)
- 2016 ಆಗಸ್ಟ್ 12 (ಯಮಲೂರು ಪ್ರದೇಶ)
- 2017 ಫೆಬ್ರುವರಿ 16 (ಇಬ್ಬಲೂರು ಪ್ರದೇಶ)
- 2017 ಮೇ 7 (ಯಮಲೂರು ಪ್ರದೇಶ)

ಕೆರೆಯಿಂದ ಇದುವರೆಗೆ ಸುಮಾರು 19,000 ಟನ್ ಕಳೆ ಹೊರಗೆ ತೆಗೆಯಲಾಗಿದೆ.

ಕೆರೆಗೆ ತ್ಯಾಜ್ಯನೀರು ಹರಿಸುತ್ತಿರುವ 60ಕ್ಕೂ ಹೆಚ್ಚು ಕೈಗಾರಿಕೆಗಳ ಸ್ಥಳಾಂತರ

ದಾಲ್ ಸರೋವರದ ಸ್ವಚ್ಛತೆಗೆ ಶ್ರೀನಗರ ಆಡಳಿತವು ಅನುಸರಿಸಿದ ತಂತ್ರಜ್ಞಾನವನ್ನೇ ಬಳಸಿ ಬೆಳ್ಳಂದೂರು ಕೆರೆಯನ್ನು ಶೀಘ್ರವೇ ಸ್ವಚ್ಛಗೊಳಿಸಬೇಕು ಎಂದು ಹಸಿರು ನ್ಯಾಯಮಂಡಳಿ ಆದೇಶಿಸಿತ್ತು.

ಬೆಂಗಳೂರಿನಲ್ಲಿರುವ ಕೆರೆಗಳ ಸ್ವಚ್ಛತೆ, ರಾಜಕಾಲುವೆಗಳ ನಿರ್ವಹಣೆಯಲ್ಲಿ ಸರ್ಕಾರದ ಕುರಿತು ಎನ್‌ಜಿಟಿ ಎರಡು ವರ್ಷಗಳಲ್ಲಿ ನಾಲ್ಕು ಬಾರಿ ಆದೇಶ ನೀಡಿದೆ.

1970ರಲ್ಲಿ 10 ಮೀಟರ್ ಆಳವಿದ್ದ ಬೆಳ್ಳಂದೂರು ಕೆರೆ ಈಗ 5.4 ಮೀಟರ್‌ಗೆ ಬಂದಿದೆ

ಸಣ್ಣದಾಗಿ ಕಾಣಿಸಿಕೊಂಡ ಬೆಂಕಿ ಇಷ್ಟೊಂದು ವ್ಯಾಪಿಸಿದ್ದಾದರೂ ಏಕೆ?

# ಕೆರೆಯ ಒಡಲೊಳಗೆ ಅಗೆದಷ್ಟು ಜ್ವಾಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆರೆಯ ಮೇಲ್ಭಾಗದಲ್ಲಿ ಬೆಂಕಿ ಆರಿತ್ತು. ಆದರೆ, ನೆಲದೊಳಗೆ ಕುದಿಯುತ್ತಿತ್ತು. ನಾವು ಹೂಳನ್ನು ಅಗೆದು, ಅಗೆದು ಬೆಂಕಿ ಆರಿಸಿದೆವು. ಒಂದೆಡೆ ಬೆಂಕಿ ಆರಿಸಿದರೆ ಮತ್ತೊಂದೆಡೆ ಧುತ್ತೆಂದು ಜ್ವಾಲೆ ಕಾಣಿಸಿಕೊಳ್ಳುತ್ತಿತ್ತು. ಉರಿವ ಬೆಂಕಿಯ ಮೇಲೆ ನಿಂತು ಕಾರ್ಯಾಚರಣೆ ನಡೆಸಿದೆವು.

ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆಯ ಕಷ್ಟವನ್ನು ಕಟ್ಟಿಕೊಟ್ಟಿದ್ದು ಹೀಗೆ. ಕೆರೆಯಂಚಿನಲ್ಲಿ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿ ಇಷ್ಟೊಂದು ವ್ಯಾಪಿಸಿದ್ದಾದರೂ ಹೇಗೆ? ಎಂಬ ಯಕ್ಷ ಪ್ರಶ್ನೆಗೂ ಅವರೇ ಉತ್ತರಿಸಿದರು.

‘ಘಟನೆ ಬಗ್ಗೆ ಈಗಾಗಲೇ ಸ್ಥಳೀಯರ ಹೇಳಿಕೆಗಳನ್ನು ಸಂಗ್ರಹಿಸಿದ್ದೇವೆ. ಅವರ ಪ್ರಕಾರ, 15 ವರ್ಷಗಳಿಂದ ಕೆರೆಗೆ ನಿರಂತರವಾಗಿ ತ್ಯಾಜ್ಯ ಸುರಿಯಲಾಗಿದೆ. ಅದರ ಮೇಲೆ ಹುಲ್ಲು ಬೆಳೆದಿದೆ. ನಾವು ಹುಲ್ಲಿಗೆ ಬಿದ್ದ ಬೆಂಕಿಯನ್ನು ಆರಿಸುವಷ್ಟರಲ್ಲಿ ನೆಲದೊಳಗೆ ವರ್ಷಾನುಗಟ್ಟಲೆ ಸಂಗ್ರಹವಾಗಿದ್ದ ತ್ಯಾಜ್ಯಕ್ಕೆ ಬೆಂಕಿ ಹೊತ್ತಿಕೊಂಡಿದೆ’ ಎಂದು ಸಿಬ್ಬಂದಿ ವಿವರಿಸಿದರು.

‘ದೊಮ್ಮಲೂರು, ಈಜಿಪುರ,



ಕೋರಮಂಗಲ, ಸರ್ಜಾಪುರ, ಅಗರ, ಬೆಳ್ಳಂದೂರು ಹಾಗೂ ಸುತ್ತಮುತ್ತಲ ಪ್ರದೇಶದ ತ್ಯಾಜ್ಯವನ್ನೆಲ್ಲ ತಂದು ಕೆರೆಯಲ್ಲಿ ಸುರಿಯಲಾಗುತ್ತಿತ್ತು. ವರ್ಷದ ಹಿಂದಷ್ಟೇ ಕೆರೆಯ ಪಕ್ಕದ ಜಾಗದಲ್ಲಿ ವಸತಿ ಗೃಹ ನಿರ್ಮಿಸುವುದಕ್ಕಾಗಿ ಸೇನೆಯು ಗೋಡೆ ನಿರ್ಮಿಸಿದೆ. ಆ ಬಳಿಕವಷ್ಟೇ ತ್ಯಾಜ್ಯ ಸಾಗಾಟ ನಿಂತಿದೆ.’

‘ಇಲ್ಲಿ ನೀರಿಗಿಂತ ತ್ಯಾಜ್ಯವೇ ಹೆಚ್ಚಿದೆ. ಅವೆಲ್ಲವೂ ಒಂದೇ ಭಾಗಕ್ಕೆ ತೇಲುತ್ತಾ ಬಂದು ಸೇರುತ್ತಿವೆ. ಕಾಲಕ್ರಮೇಣ ಸಂಗ್ರಹವಾಗಿರುವ ತ್ಯಾಜ್ಯ ಹೂಳಾಗಿ ಪರಿವರ್ತನೆ ಆಗಿದೆ. ಹಾಗಾಗಿ ಕೆರೆಯ ಅಂಚಿನ ಭಾಗ ಮೈದಾನವಾಗಿ ಮಾರ್ಪಡುತ್ತಿದೆ. ಅದರ ಮೇಲೆ ಹುಲ್ಲು,

> **ಕೆರೆಗೆ ಬೆಂಕಿ ಬಿದ್ದಿದೆ ಎಂಬ ಕರೆ ಬರುತ್ತಿದ್ದಂತೆ ನಮಗೆ ಆಶ್ಚರ್ಯವಾಯಿತು. ನೀರು ತುಂಬಿರುವ ಕೆರೆಗೆ ಹೇಗೆ ತಾನೇ ಬೆಂಕಿ ಬೀಳುತ್ತದೆ ಎಂಬ ಕುತೂಹಲವೂ ಇತ್ತು. ಸ್ಥಳಕ್ಕೆ ಬಂದಾಗ ವಾಸ್ತವ ತಿಳಿಯಿತು. –ಅಗ್ನಿಶಾಮಕ ಸಿಬ್ಬಂದಿ**

ಕಸ–ಕಡ್ಡಿ ದಟ್ಟವಾಗಿ ಬೆಳೆದಿದೆ. ಸದ್ಯದ ಸ್ಥಿತಿ ನೋಡಿದರೆ, ಬೆಳ್ಳಂದೂರು ಕೆರೆಗೆ ಇನ್ನೂ ಮುಂದೆಯೂ ಬೆಂಕಿಯ ಅಪಾಯ ತಪ್ಪಿದ್ದಲ್ಲ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಮೇಲ್ಭಾಗದ ಬೆಂಕಿ ನಂದಿಸಿದ್ದೇವೆ ಹೊರತು, ತಳಭಾಗದ ಬೆಂಕಿ ನಂದಿಸಲು ಸಾಧ್ಯವಾಗಿಲ್ಲ. ಕೆರೆಯ ಆಳದಲ್ಲಿ ಬೆಂಕಿ ಹಾಗೆಯೇ ಇರುವ ಸಾಧ್ಯತೆಯೂ ಇದೆ. ಹೀಗಾಗಿ ಆತಂಕ ಇದ್ದೇ ಇದೆ’ ಎಂದು ಸಿಬ್ಬಂದಿಯೊಬ್ಬರು ತಿಳಿಸಿದರು.

ಅಗೆದಷ್ಟು ಗಾಜಿನ ಬಾಟಲಿಗಳು, ಕೊಳೆತ ತ್ಯಾಜ್ಯ, ಬೆಂಕಿಯಲ್ಲಿ ಸುಟ್ಟು ಕರಕಲಾದ ಪ್ರಾಣಿಗಳ ಕಳೇಬರ ಕೈಗೆ ಸಿಕ್ಕವು. ಕಾಲಿಟ್ಟಲೆಲ್ಲ ಕೆಂಡ ತುಳಿದ ಅನುಭವವಾಗುತ್ತಿತ್ತು ಎಂದು ಇನ್ನೊಬ್ಬ ಸಿಬ್ಬಂದಿ ವಿವರಿಸಿದರು.

‘ಗುದ್ದಲಿ, ಹಾರೆಯಂಥ ಹಲವು ಸಲಕರಣೆಗಳನ್ನು ಹಿಡಿದು ಕೆರೆಯಲ್ಲಿದ್ದ ಹೂಳು ತೆಗೆದಿದ್ದೇವೆ. ಕೆಲ ನಿಮಿಷದಲ್ಲೇ ಆ ಸಲಕರಣೆಗಳೂ ಬಿಸಿಯಾದವು. ಹಿಡಿದುಕೊಳ್ಳಲೂ ಆಗಲಿಲ್ಲ. ಅಷ್ಟು ಕಾವು ಹೂಳಿನಲ್ಲಿತ್ತು’ ಎಂದು ಮಾಹಿತಿ ನೀಡಿದರು.

‘ಕೆರೆ ಪಕ್ಕದಲ್ಲಿರುವ ಸೇನೆಯ ತರಬೇತಿ ಶಿಬಿರದ ಕ್ಯಾಂಟಿನ್ ಜಾಗದಲ್ಲಿ ವಾರಕ್ಕೊಮ್ಮೆಯಾದರೂ ಹುಲ್ಲಿಗೆ ಬೆಂಕಿ ಹೊತ್ತಿಕೊಳ್ಳುತ್ತದೆ. ಅವಾಗಲೆಲ್ಲ ಇಲ್ಲಿಗೆ ಬಂದು ಬೆಂಕಿ ಆರಿಸುತ್ತೇವೆ. ಆದರೆ, ಈ ಬಾರಿ ಕೆರೆಯ ಬೆಂಕಿ ಆರಿಸಲು ಬಂದಿದ್ದೇವೆ’ ಎಂದು ಅವರು ತಿಳಿಸಿದರು.

## ಸೇನೆ– ಬಿಡಿಎ ಜಟಾಪಟಿ

ಕೆರೆಯು ಬಿಡಿಎ ವ್ಯಾಪ್ತಿಗೆ ಬರುತ್ತದೆ. ಆದರೆ, ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಸೇನೆಗೆ ಸೇರಿದ್ದು, ಹಲವು ವರ್ಷಗಳಿಂದ ಜಾಗಕ್ಕೆ ಸಂಬಂಧಿಸಿದಂತೆ ಸೇನೆ–ಬಿಡಿಎ ನಡುವೆ ಜಟಾಪಟಿ ಇದೆ. ಇದು ಹೂಳು ತೆಗೆಯಲು ಅಡ್ಡಿಯಾಗಿದೆ.

ದಿನದ 24 ಗಂಟೆಯೂ ಸೇನೆಯ ಸಿಬ್ಬಂದಿ, ಶಸ್ತ್ರಸಜ್ಜಿತವಾಗಿ ಗಸ್ತು ತಿರುಗುತ್ತಿದ್ದಾರೆ. ಹೀಗಾಗಿ ಯಾರೊಬ್ಬರೂ ಕೆರೆಯತ್ತ ಮುಖ ಮಾಡುತ್ತಿಲ್ಲ. ಅಭಿವೃದ್ಧಿ ಕೆಲಸ ಕೈಗೊಳ್ಳಲು ಸ್ಥಳೀಯ ಅಧಿಕಾರಿಗಳು ಹೆದರುತ್ತಿದ್ದಾರೆ.

ಮೇಯರ್ ಸಂಪತ್‌ರಾಜ್, ‘ಕೆಲ ತಿಂಗಳ ಹಿಂದಷ್ಟೇ ಕೆರೆಯ ವೀಕ್ಷಣೆಗೆ ಬಂದಿದ್ದ ಇಬ್ಬರು ಅಧಿಕಾರಿಗಳನ್ನು ಸೇನೆಯವರು ಬಂಧಿಸಿದ್ದರು. ಅಂದಿನಿಂದ ಅಧಿಕಾರಿಗಳು ಇಲ್ಲಿ ಬರಲು ಹೆದರುತ್ತಾರೆ. ಅಭಿವೃದ್ಧಿಗೆ ಸೇನೆ ಅಡ್ಡಿಯಾಗಿದೆ. ಸೇನೆ ಅಧಿಕಾರಿಗಳ ಜತೆ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುತ್ತೇನೆ’ ಎಂದರು.

ಬಿಡಿಎ, ಬಿಬಿಎಂಪಿ, ಜಲಮಂಡಳಿ ನಡುವೆ ಹೊಂದಾಣಿಕೆ ಇಲ್ಲ

# ಸಮನ್ವಯ ಕೊರತೆ: ನಲುಗುತ್ತಿದೆ ಜಲಮೂಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಂದೂರು ಕೆರೆಯ ನಿರ್ವಹಣೆ ಬಿಡಿಎಗೆ ಸಂಬಂಧಿಸಿದ್ದು. ಆದರೆ, ಇದಕ್ಕೆ ಸಂಸ್ಕರಿಸದ ತ್ಯಾಜ್ಯನೀರು ಸೇರದಂತೆ ತಡೆಯಬೇಕಾಗಿರುವುದು ಜಲಮಂಡಳಿ. ಕಸವನ್ನು ಸುರಿಯದಂತೆ ರಕ್ಷಣೆ ಒದಗಿಸಬೇಕಾಗಿರುವುದು ಬಿಬಿಎಂಪಿ. ಈ ಮೂರು ಸಂಸ್ಥೆಗಳ ಸಮನ್ವಯ ಕೊರತೆಯಿಂದಾಗಿ ಈ ಜಲಮೂಲದ ಒಡಲು ದಿನೇ ದಿನೇ ಕಲುಷಿತಗೊಳ್ಳುತ್ತಲೇ ಇದೆ.

ಈ ಮೂರು ಸಂಸ್ಥೆಗಳ ಸಮನ್ವಯ ಏರ್ಪಡುವಂತೆ ಮಾಡಿ, ಕೆರೆಯ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕಿದ್ದ ರಾಜ್ಯ ಸರ್ಕಾರವೂ ಕೈಕಟ್ಟಿ ಕೂತಿದೆ.

ಬೆಳ್ಳಂದೂರು ಕೆರೆ ಪುನರುಜ್ಜೀವನದ ಹೊಣೆ ಹೊತ್ತ ಇಲಾಖೆಗಳ ಕಾರ್ಯವೈಖರಿ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ) ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಬಳಿಕವೂ ಈ ಸಂಸ್ಥೆಗಳು ಒಂದನ್ನೊಂದು ಬೊಟ್ಟು ಮಾಡುತ್ತಾ ಕಾಲಹರಣ ಮಾಡುತ್ತಿವೆ.

ಬೆಳ್ಳಂದೂರು ಕೆರೆಗೆ ಸೇರುತ್ತಿರುವ ಕೊಳಚೆ ನೀರು ನಿಲ್ಲುವವರೆಗೂ ಕೆರೆಯನ್ನು ಶುದ್ಧೀಕರಿಸಲು ಸಾಧ್ಯವಿಲ್ಲ ಎಂದು ಬಿಡಿಎ ಹೇಳಿದರೆ, ಕೊಳಚೆ ನೀರು ಶುದ್ಧೀಕರಣ ಘಟಕಗಳನ್ನು (ಎಸ್‌ಟಿಪಿ) ಅಳವಡಿಸಲು 2020ರವರೆಗೂ ಕಾಲಾವಕಾಶ ಬೇಕು ಎಂದು ಜಲಮಂಡಳಿ ಹೇಳುತ್ತಿದೆ. ಕೆರೆಗೆ ಕಸ ಸುರಿಯದಂತೆ ನೋಡಿಕೊಳ್ಳುವಲ್ಲಿ ಪಾಲಿಕೆ ವಿಫಲವಾಗಿದೆ.

ಎನ್‌ಜಿಟಿಯಿಂದ ಛೀಮಾರಿ ಹಾಕಿಸಿಕೊಂಡ ಬಳಿಕ ಎಚ್ಚೆತ್ತ ಬಿಡಿಎ, ಕೆರೆಯ ಕಳೆ ತೆಗೆಸಲು ಅಲ್ಪಾವಧಿ ಟೆಂಡರ್ ಕರೆದು ಗುತ್ತಿಗೆ ನೀಡಿತ್ತು. 2017ರ ಏಪ್ರಿಲ್ ಬಳಿಕ 19 ಸಾವಿರ ಟನ್ ಕಳೆಯನ್ನು ತೆಗೆಯಲಾಗಿತ್ತು. ಆದರೆ, ಕೆರೆಯಲ್ಲಿದ್ದ ಹುಲ್ಲನ್ನು ತೆಗೆದಿರಲಿಲ್ಲ. ಇದಕ್ಕೆ ₹3.35 ಕೋಟಿ ವೆಚ್ಚವಾಗಿದೆ.

ಕೆರೆಯ ಪುನಶ್ಚೇತನಕ್ಕೆ ತಾತ್ಕಾಲಿಕ ಹಾಗೂ ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎನ್‌ಜಿಟಿ ಸೂಚಿಸಿತ್ತು. ತಾತ್ಕಾಲಿಕ ಕ್ರಮವಾಗಿ ಕಳೆ ತೆಗೆದು ತಂತಿ ಬೇಲಿ ಅಳವಡಿಸಲಾಗಿದೆ. ದೀರ್ಘಾವಧಿ ಕ್ರಮವಾಗಿ ಕೆರೆಯಲ್ಲಿರುವ ಹೂಳು, ಹುಲ್ಲು ತೆಗೆಯಬೇಕು. ಕೆರೆಗೆ ಕೊಳಚೆ ನೀರು ಸೇರದಂತೆ ತಡೆದರೆ ಮಾತ್ರ ಇದು ಸಾಧ್ಯ ಎಂದು ಹೆಸರು ಹೇಳಲು ಇಚ್ಛಿಸದ ಬಿಡಿಎ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಗರ, ಶ್ರೀನಿವಾಗಿಲು ಕಡೆಯಿಂದ ಬೆಳ್ಳಂದೂರು ಕೆರೆಗೆ ಪ್ರತಿದಿನ 10 ಕೋಟಿ ಲೀಟರ್ ಕೊಳಚೆ ನೀರು ಸೇರುತ್ತಿದೆ. ಕೆರೆಗೆ ಸೇರುವ ಎಲ್ಲ ನೀರನ್ನು ಶುದ್ಧೀಕರಿಸಲು ಎಸ್‌ಟಿಪಿ ಅಳವಡಿಸಲು ಜಲಮಂಡಳಿಯ ಅಧಿಕಾರಿಗಳು 2020ರವರೆಗೆ ಕಾಲಾವಕಾಶ ಕೋರಿದ್ದಾರೆ.

**ಅನುದಾನದ ಕೊರತೆ:** ಕೆರೆಗೆ ಸೇರುವ ಕೊಳಚೆ ನೀರನ್ನು ಬೇರೆಡೆ ತಿರುಗಿಸಿ ಜಲಮೂಲವನ್ನು ಶುದ್ಧೀಕರಿಸುವ ಪ್ರಸ್ತಾವವನ್ನು ಸರ್ಕಾರಕ್ಕೆ ಹಾಗೂ ಎನ್‌ಜಿಟಿಗೆ ಸಲ್ಲಿಸಲಾಗಿದೆ. ಸರ್ಕಾರದಿಂದ ಇನ್ನೂ ಒಪ್ಪಿಗೆ ಸಿಕ್ಕಿಲ್ಲ. ಕೆರೆ ಅಭಿವೃದ್ಧಿ ಪಡಿಸಲು ಬಿಡಿಎ ಬಳಿ ಹಣ ಇಲ್ಲ. ಸರ್ಕಾರವು ಅನುದಾನ ನೀಡುವ ಅಗತ್ಯವಿದೆ ಎಂದರು.

## ‘ಕೊಳಚೆ ನೀರು ತಡೆಯುವುದು ಕಷ್ಟ’

ಬೆಳ್ಳಂದೂರು ಕೆರೆಗೆ ಸೇರುತ್ತಿರುವ ಕೊಳಚೆ ನೀರನ್ನು ಸಂಪೂರ್ಣವಾಗಿ ತಡೆಗಟ್ಟುವುದು ಕಷ್ಟದ ಕೆಲಸ ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ಹೇಳಿದರು.

ಜಲಮಂಡಳಿ ವತಿಯಿಂದ ಎಷ್ಟೇ ಎಸ್‌ಟಿಪಿಗಳನ್ನು ನಿರ್ಮಿಸಿದರೂ, ಸಾರ್ವಜನಿಕರ ಸಹಕಾರವಿಲ್ಲದೆ ಇದು ಸಾಧ್ಯವಾಗದು ಎಂದು ಅವರು ಸ್ಪಷ್ಟಪಡಿಸಿದರು. ಕೆಲವು ಹೊಸ ಎಸ್‌ಟಿಪಿಗಳನ್ನು ನಿರ್ಮಿಸಲಾಗುತ್ತಿದ್ದು 2019ರ ಮಾರ್ಚ್ ವೇಳೆಗೆ ಇವು ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ ಎಂದು ಹೇಳಿದರು.

## ಕೆರೆ ಸಂರಕ್ಷಣೆ ಕುರಿತ ಸಭೆ ನಾಳೆ

ಬೆಳ್ಳಂದೂರು ಕೆರೆಯ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ನೇತೃತ್ವದಲ್ಲಿ ಇದೇ 22 ಸಭೆ ನಡೆಯಲಿದೆ. ಪಾಲಿಕೆ, ಬಿಡಿಎ, ಜಲಮಂಡಳಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಮೇಯರ್ ಆರ್.ಸಂಪತ್ ರಾಜ್ ತಿಳಿಸಿದರು.

ಕೆರೆಗೆ ಕಸ ಹಾಗೂ ಕಟ್ಟಡ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವ ಉದ್ದೇಶದಿಂದ ಸಿ.ಸಿ.ಟಿ.ವಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.



ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಬೋಟ್ ಏರಲು ಹರಸಾಹಸಪಟ್ಟರು

# ಈಗಲೂ ಅವ್ಯವಸ್ಥೆಯ ಆಗರ: ವಿಜ್ಞಾನಿ ಟೀಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಂದೂರು ಕೆರೆ ಈಗಲೂ ಅವ್ಯವಸ್ಥೆಯ ಆಗರವಾಗಿದೆ ಎನ್ನುವುದಕ್ಕೆ ಈ ಘಟನೆ ಕನ್ನಡಿ ಹಿಡಿದಂತಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪದೇ ಪದೇ ಕಿವಿ ಹಿಂಡಿದರೂ ನಮ್ಮ ಇಲಾಖೆಗಳು ಎಚ್ಚೆತ್ತುಕೊಂಡಿಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ ಟೀಕಿಸಿದರು.

2015ರ ಮೇ ತಿಂಗಳಿನಲ್ಲಿ ಬೆಳ್ಳಂದೂರು ಕೆರೆಯಲ್ಲಿ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದು ಕೈಗಾರಿಕೆಗಳ ಕೊಳಚೆ ನೀರಿನಲ್ಲಿದ್ದ ರಾಸಾಯನಿಕಗಳಿಂದ ಉಂಟಾದ ಬೆಂಕಿ. ಕೈಗಾರಿಕೆಗಳಿಂದ ಕೊಳಚೆ ನೀರು ಸಂಸ್ಕರಣೆಯಾಗದೆ ಬರುತ್ತಿರುವುದನ್ನು ಅದು ಜಾಹೀರು ಮಾಡಿತು.

‘ಈ ಬಾರಿ ಜೊಂಡಿಗೆ ಬೆಂಕಿ ಹತ್ತಿತ್ತು. ಒಳಚರಂಡಿ ನೀರನ್ನು ಸಂಸ್ಕರಣೆಗೆ ಒಳಪಡಿಸದೇ ಕೆರೆಗೆ ಹರಿಸುವುದರಿಂದ ಕಳೆಗಳು ಸಮೃದ್ಧವಾಗಿ ಬೆಳೆಯುತ್ತವೆ. ಅವುಗಳ ಮೇಲೆ ಅನೇಕ ವರ್ಷಗಳ ಕಾಲ ಬಿಬಿಎಂಪಿ ಮತ್ತು ಸುತ್ತಮುತ್ತಲಿನವರು ಘನತ್ಯಾಜ್ಯ ಸುರಿದಿದ್ದಾರೆ. ಅದಕ್ಕೆ ಯಾರೋ ಬೆಂಕಿ ಹಚ್ಚಿದ್ದಾರೆ. ಕಳೆ ಇರುವ ಜಾಗದಲ್ಲಿ ಆಮ್ಲಜನಕ ಕೊರತೆ ಆಗುವುದರಿಂದ ಅಲ್ಲಿ ಇಂಗಾಲ ಮತ್ತು ಮಿಥೇನ್ ಉತ್ಪತ್ತಿಯಾಗುತ್ತದೆ. ಇದರಿಂದಲೇ ದಟ್ಟ ಬಿಳಿ ಹೊಗೆ ಉಂಟಾಗಿದೆ’ ಎಂದು ವಿವರಿಸಿದರು.

2015ರಲ್ಲೇ ವರದಿ ಸಲ್ಲಿಕೆ: ‘ಬೆಳ್ಳಂದೂರು ಕೆರೆ ಅಭಿವೃದ್ಧಿ ಕುರಿತು 2015ರಲ್ಲೇ ವರದಿ ಸಲ್ಲಿಸಿದ್ದೇನೆ. ಎರಡು ವರ್ಷವಾದರೂ ಅದು ಅನುಷ್ಠಾನಗೊಂಡಿಲ್ಲ. ಜೊತೆಗೆ ಹಸಿರು ನ್ಯಾಯ ಪೀಠ ಬೆಳ್ಳಂದೂರು ಕೆರೆ ಪರಿಶೀಲನೆಗೆ ತಜ್ಞರ ಸಮಿತಿ ರಚಿಸಿತ್ತು. ಅದರಲ್ಲಿ ನಾನೂ ಇದ್ದೇನೆ. ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕ್ರಮಗಳ ಬಗ್ಗೆ ವರದಿ ನೀಡಿದ್ದೆವು. ಬಿಡಿಎ ಅದನ್ನು ನಿರ್ಲಕ್ಷಿಸಿದೆ’ ಎಂದು ಹೇಳಿದರು.

‘ಬಿಡಿಎ ಅಧಿಕಾರಿಗಳು ದುಡ್ಡು ಮಾಡಲು ಯಾವ ಕೆಲಸ ಮಾಡಬೇಕೊ ಅದನ್ನು ಮಾತ್ರ ಮಾಡುತ್ತಿದ್ದಾರೆ. ನೊರೆ ರಸ್ತೆಗೆ ಹಾರಬಾರದು ಎಂದು ತಡೆಗೋಡೆ ನಿರ್ಮಿಸಿದರು. ಈಗ ನೊರೆ ಹರಿದು ಹೋಗುವಂತೆ ಇಳಿಜಾರು ಪ್ರದೇಶ ನಿರ್ಮಿಸಲು ಮುಂದಾಗಿದ್ದಾರೆ. ಇದು ನಿಷ್ಪ್ರಯೋಜಕ. ರಾಜಕಾಲುವೆಗಳನ್ನು ಅಗಲ ಮಾಡಿ ಎಂದು ನಾವು ಸಲಹೆ ನೀಡಿದರೂ ವ್ಯಾಪ್ತಿಯನ್ನು ಇನ್ನೂ ಕುಗ್ಗಿಸುತ್ತಿದ್ದಾರೆ’ ಎಂದು ಕಿಡಿಕಾರಿದರು.

ಇದೇ 12ಕ್ಕೆ ಬೆಳ್ಳಂದೂರು ಕೆರೆ ಕುರಿತು ಬಿಡಿಎನಲ್ಲಿ ಸಭೆ ನಡೆದಿತ್ತು. ಆ ಸಭೆಯಲ್ಲಿ ಬಿಡಿಎ ಆಯುಕ್ತ ರಾಕೇಶ್ ಸಿಂಗ್ ‘ನಮ್ಮ ಕೈಯಲ್ಲಿ ಕೆರೆ ಅಭಿವೃದ್ಧಿ ಆಗುವುದಿಲ್ಲ’ ಎಂದು ಕೈಚೆಲ್ಲಿದ್ದರು. ಅಭಿವೃದ್ಧಿ ಸಾಧ್ಯವಿಲ್ಲ ಎಂದಾದರೆ, ಅದನ್ನು ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಕೆಎಲ್‌ಸಿಡಿಎ) ಹಸ್ತಾಂತರಿಸಿ ಎಂದಿದ್ದೇವೆ. ಬಿಡಿಎ ಅಧಿಕಾರಿಗಳು ಎಂಟು ತಿಂಗಳಿಂದ ಕಣ್ಣೊರೆಸುವ ಕೆಲಸವನ್ನಷ್ಟೇ ಮಾಡುತ್ತಿದ್ದಾರೆ. ಕೆರೆ ಸ್ವಚ್ಛತೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ’ ಎಂದು ದೂರಿದರು.

## ಡೆಂಗಿ, ಚಿಕುನ್‌ಗುನ್ಯಾ ಹಾವಳಿ

ಬೆಂಕಿ ಮತ್ತು ನೊರೆ ಹಾರುವ ಘಟನೆಗಳು ಪದೇ ಪದೇ ಆಗುತ್ತಿರುವುದರಿಂದ ಬೆಳ್ಳಂದೂರು ಕೆರೆ ಸುತ್ತಮುತ್ತಲಿನ ಜನರಲ್ಲಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಮೂರು ವರ್ಷಗಳ ಅವಧಿಯಲ್ಲಿ ಯಮಲೂರು ಗ್ರಾಮದಲ್ಲಿ 100ಕ್ಕೂ ಹೆಚ್ಚು ಮಂದಿ ಡೆಂಗಿ ಜ್ವರ, ಚಿಕುನ್‌ಗುನ್ಯಾ ಕಾಯಿಲೆಯಿಂದ ನರಳಿದ್ದಾರೆ. ಅನೇಕರಲ್ಲಿ ಗಂಟಲು ಬೇನೆ, ಜ್ವರ, ತುರಿಕೆಯಂತಹ ಕಾಯಿಲೆಗಳಿಂದ ಬಳಲುತ್ತಿದ್ದಾರೆ.

‘ಕೆರೆ ಕಲುಷಿತಗೊಂಡಿರುವುದರಿಂದ ಅಲ್ಲಿ ಉಂಟಾಗುವ ದಟ್ಟ ಹೊಗೆಯಲ್ಲಿ ರಾಸಾಯನಿಕ ಅಂಶಗಳು ಸೇರಿರುತ್ತವೆ. ಅದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚಿದೆ. ಸುತ್ತಮುತ್ತಲ ಕೊಳವೆ ಬಾವಿಗಳಲ್ಲಿ ನೈಟ್ರೇಟ್ ಅಂಶ ಹಾಗೂ ಭಾರಲೋಹದ ಅಂಶ ಕಂಡುಬಂದಿವೆ. ಈ ನೀರನ್ನು ನಿಯಮಿತವಾಗಿ ಕುಡಿಯುವುದರಿಂದ ಮೂತ್ರಪಿಂಡ ವೈಫಲ್ಯ ಉಂಟಾಗುತ್ತದೆ’ ಎಂದು ರಾಮಚಂದ್ರ ವಿವರಿಸಿದರು.

‘ತರಕಾರಿಯಲ್ಲಿ, ಮೀನಿನ ದೇಹದಲ್ಲಿ ಭಾರಲೋಹದ ವಸ್ತುಗಳು ಪತ್ತೆಯಾಗಿವೆ. ಕಲ್ಮಷವಾದ ಈ ನೀರನ್ನೇ ಕೋಲಾರಕ್ಕೆ ಹರಿಸಲು ನಿರ್ಧರಿಸಿದ್ದಾರೆ. ಇಲ್ಲಿನ ಜನರನ್ನು ಸಾಯಿಸುವುದಲ್ಲದೆ, ಅಲ್ಲಿಯವರನ್ನು ಸಾಯಿಸುವ ಹುನ್ನಾರ ಇದಾಗಿದೆ’ ಎಂದು ಹೇಳಿದರು.

> **ಕಲುಷಿತ ನೀರನ್ನು ಶುದ್ಧಗೊಳಿಸುವ ಕಾರ್ಯಕ್ಕಿಂತ, ಕೆ ರೆ ಕೋಡಿ ಹಾಗೂ ಬೆಳ್ಳಂದೂರು ಅಮಾನಿ ಕೆರೆಯಲ್ಲಿ ಕೊಳಕು ನೀರು ಸಂಗ್ರಹಗೊಳ್ಳದಂತೆ ಕ್ರಮಗೊಳ್ಳಬೇಕು.**
> **ಎಸ್.ಭಾಸ್ಕರ್,** ಯಮಲೂರು ನಿವಾಸಿ

> **ರಾಜಕಾಲುವೆಯಲ್ಲಿ ಮಣ್ಣು ತುಂಬಿರುವುದರಿಂದ ಕಲುಷಿತ ನೀರು ಮಡುಗಟ್ಟಿದೆ. ನಿಂತ ನೀರಿನಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಾಗಿದೆ.**
> **ನಾರಾಯಣ,** ಯಮಲೂರು ನಿವಾಸಿ

## ಮಿತಿಗಿಂತ ಹೆಚ್ಚು ಇಲ್ಲ ಮೀಥೇನ್ ಪ್ರಮಾಣ

ಬೆಂಗಳೂರು: ಈ ಹಿಂದೆ ಬೆಂಕಿ ಕಾಣಿಸಿಕೊಂಡಾಗ ಸ್ಥಳದಿಂದ ಮಾದರಿ ಸಂಗ್ರಹಿಸಿ, ರಾಸಾಯನಿಕ ವಿಶ್ಲೇಷಣೆ ನಡೆಸಲಾಗಿತ್ತು. ಆಗ ಶೇ 0.002ರಷ್ಟು ಮಾತ್ರ ಮಿಥೇನ್ ಇರುವುದು ಕಂಡುಬಂದಿದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಮಹೇಂದ್ರ ತಿಳಿಸಿದರು.

‘ಆ ನಂತರ ಕೆರೆಗೆ ಬೆಂಕಿ ಹಾಕಿ ಪರೀಕ್ಷೆ ನಡೆಸಿದ್ದೇವೆ. ಮಿಥೇನ್ ಪ್ರಮಾಣ ಶೇ 5ಕ್ಕಿಂತ ಹೆಚ್ಚಿದ್ದರೆ ಮಾತ್ರ ನೀರಿನಲ್ಲಿ ಬೆಂಕಿ ಹತ್ತಿಕೊಳ್ಳುತ್ತದೆ. ಕೆರೆಯ ಸುತ್ತಲೂ ಒಣಹುಲ್ಲು ಇದೆ. ಕೆರೆಯಲ್ಲಿ ಬೆಳೆದ ಹಸಿರು ಹುಲ್ಲನ್ನು ಕತ್ತರಿಸಲು ಅನೇಕರು ಇಲ್ಲಿಗೆ ಬರುತ್ತಾರೆ. ಅವರು ಬೀಡಿ ಅಥವಾ ಸಿಗರೇಟು ಸೇದಿ ಬಿಸಾಡುವುದರಿಂದ ಬೆಂಕಿ ಹತ್ತುತ್ತದೆ’ ಎಂದರು.

ಈ ಹಿಂದೆ ಕೆರೆಯ ಮಧ್ಯದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಆಗಲೂ ಅಲ್ಲಿ ಜೊಂಡು ಕತ್ತರಿಸಲು ಹೋಗಿದ್ದಾಗ ಬೆಂಕಿ ಹಾಕಿದ್ದಾರೆ. ಈ ಭಾಗದಲ್ಲಿ ಸುಮಾರು 100 ಕುಟುಂಬಗಳು ಈ ಕಳೆಯನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಿವೆ ಎಂದು ಮಾಹಿತಿ ನೀಡಿದರು.

## ನೀರು, ಆಹಾರಕ್ಕೆ ಪರದಾಟ

ರಕ್ಷಣಾ ಪಡೆಯ ಸಿಬ್ಬಂದಿಯು ಕುಡಿಯುವ ನೀರು ಹಾಗೂ ಆಹಾರಕ್ಕೆ ಪರದಾಡಿದರು.

ಬಿಸ್ಕತ್ ತಿಂದೇ ಸಿಬ್ಬಂದಿಯು ಕಾರ್ಯಾಚರಣೆ ನಡೆಸಿದರು. ಬಿಬಿಎಂಪಿ, ಬಿಡಿಎ ಅಧಿಕಾರಿಗಳು ಅವರ ಆಹಾರಕ್ಕೆ ವ್ಯವಸ್ಥೆ ಮಾಡಲಿಲ್ಲ. ಶನಿವಾರ ಬೆಳಿಗ್ಗೆ ಅಗ್ನಿಶಾಮಕ ದಳದ ಅಧಿಕಾರಿಯೇ ಪಲಾವ್ ತಂದು ಕೊಟ್ಟರು. ಸಿಬ್ಬಂದಿಗೆ ಅದು ಸಾಕಾಗಲಿಲ್ಲ. ಅರೆಹೊಟ್ಟೆಯಲ್ಲೇ 28 ಗಂಟೆ ಕಾರ್ಯಾಚರಣೆ ಮಾಡಿದ ಅವರು, ಎಲ್ಲ ಮುಗಿದ ಮೇಲೆ ತರಬೇತಿ ಕೇಂದ್ರದಿಂದ ತರಿಸಲಾಗಿದ್ದ ಊಟ ಮಾಡಿದರು.

‘ತುರ್ತು ಕೆಲಸ ನಮ್ಮದು. ಬೆಂಕಿ ನಂದಿಸುವುದು ನಮ್ಮ ಕರ್ತವ್ಯ. ಕೆರೆಯು ಬಿಡಿಎ ಸುಪರ್ದಿಗೆ ಬರುತ್ತದೆ. ಅದರ ಅಧಿಕಾರಿಗಳು ಯಾರೂ ಊಟದ ಬಗ್ಗೆ ಕೇಳಲಿಲ್ಲ’ ಎಂದು ಸಿಬ್ಬಂದಿ ಹೇಳಿದರು.

ಮೇಯರ್ ಸಂಪತ್ ರಾಜ್, ‘ನೀರು, ಊಟ ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೆ’ ಎಂದರು. ‘ಏನೇನು ತಂದು ಕೊಟ್ಟಿದ್ದಿರಾ ಹೇಳಿ’ ಎಂದು ಮಾಧ್ಯಮದವರು ಪ್ರಶ್ನಿಸುತ್ತಿದ್ದಂತೆ, ಉತ್ತರಿಸಲು ತಡವರಿಸಿದರು.

## ಮೂವರು ಶಾಸಕರಲ್ಲೂ ಗೊಂದಲ

ಕೆರೆ ಯಾರ ವ್ಯಾಪ್ತಿಗೆ ಸೇರಿದ್ದು ಎಂಬ ಬಗ್ಗೆ ಶಾಸಕರಲ್ಲೇ ಗೊಂದಲ ಇದೆ. ಬೆಂಕಿ ಕಾಣಿಸಿಕೊಂಡಿದ್ದ ಕೆರೆಯ ಭಾಗವು ಕೋರಮಂಗಲ, ಮಹದೇವಪುರ, ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದರೆ, ಘಟನೆ ಬಗ್ಗೆ ಮಾಹಿತಿ ಕೇಳಿದಾಗ ಶಾಸಕರು, ಒಬ್ಬರನ್ನೊಬ್ಬರು ದೂರಿದರು.

‘ಆ ಕೆರೆ ನಮಗೆ ಬರುವುದಿಲ್ಲ. ಆ ಶಾಸಕರಿಗೆ ಬರುತ್ತದೆ. ಅವರನ್ನೇ ಕೇಳಿ’ ಎಂದೇ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು. ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ, ಸ್ಥಳಕ್ಕೆ ಸಂಜೆ ಬಂದು ಹೋದರು.

ಕೆರೆ ಸಂರಕ್ಷಣೆ ಹೋರಾಟಗಾರ ಜಗದೀಶ್ ರೆಡ್ಡಿ, ‘ಶಾಸಕರೆಲ್ಲರೂ ನಮ್ಮ ರಾಜ್ಯದವರೇ ಎಂಬುದನ್ನು ಮರೆಯಬಾರದು. ಬೆಳ್ಳಂದೂರು ಕೆರೆ ರಾಜ್ಯದಲ್ಲೇ ಇದ್ದು, ಅದರ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

## ಸ್ಥಳಕ್ಕೆ ಬಂದ ಗಣ್ಯರು ಏನಂದರು?

ಮನುಷ್ಯ ನಿರ್ಮಿತ ವಿಪತ್ತು ಇದು. ಕೆರೆಯ ನೀರಿನಿಂದ ಬೆಂಕಿ ಆರಿಸಬೇಕು. ಇಲ್ಲಿ ಕೆರೆಯ ನೀರಿನಿಂದಲೇ ಕೆರೆಯ ಬೆಂಕಿಯನ್ನು ಆರಿಸುವ ಸ್ಥಿತಿ ಬಂದಿದೆ. ಪರಿಸರ ಸಚಿವನಾಗಿದ್ದಾಗ ಕೆರೆ ಅಭಿವೃದ್ಧಿ ಬಗ್ಗೆ ಅಧಿಕಾರಿಗಳ ಸಭೆ ನಡೆಸಿದ್ದೆ. ಕೆಲ ನಿರ್ದೇಶನ ನೀಡಿದ್ದೆ. ಅವುಗಳನ್ನು ಅಧಿಕಾರಿಗಳು ಯಾರೂ ಜಾರಿಗೆ ತಂದಿಲ್ಲ. ಈ ಬೆಂಕಿ ನೋಡಿ ಅವರಿಗೆಲ್ಲ ನಾಚಿಕೆ ಬರಬೇಕು. ಏನಾದರೂ ಕೆರೆ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳು ಗಮನಹರಿಸಬೇಕು.

– **ಪ್ರಕಾಶ್ ಜಾವಡೇಕರ್**
ಕೇಂದ್ರ ಮಾನವ ಸಂಪನ್ಮೂಲ ಸಚಿವ

ಕೈಗಾರಿಕೆಯ ತ್ಯಾಜ್ಯ ಕೆರೆ ಸೇರುತ್ತಿದ್ದು, ಅದನ್ನು ಸೇರದಂತೆ ತಡೆಯಬೇಕಿದೆ. ನಾವು ಸುಮ್ಮನೇ ಕುಳಿತಿಲ್ಲ, ಬಿಡಿಎ ಹಾಗೂ ಜಲಮಂಡಳಿ ಅಧಿಕಾರಿಗಳಿಗೆ ಕಾಲಕಾಲಕ್ಕೆ ನಿರ್ದೇಶನ ನೀಡಿದ್ದೇವೆ. ಕೆರೆ ಸಂರಕ್ಷಣೆ ಕುರಿತು ಡಿ. 15ರಂದು ಸಭೆ ನಡೆಸಿದ್ದೆವು. ಈಗ ಈ ಘಟನೆ ಸಂಭವಿಸಿದೆ. ಮುಂಬರುವ ಬಜೆಟ್‌ನಲ್ಲಿ ಬೆಳ್ಳಂದೂರು ಕೆರೆ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲು ಪ್ರಯತ್ನಿಸುವೆ

– **ಸಂಪತ್ ರಾಜ್,** ಮೇಯರ್

ಐಟಿ–ಬಿಟಿ ಕಂಪನಿಗಳ ಮಧ್ಯ ಈ ಕೆರೆ ಇದೆ. ಇದನ್ನೇ ಸಂರಕ್ಷಿಸಲು ಆಗುತ್ತಿಲ್ಲ. ಎನ್‌ಜಿಟಿಯು ಸಾಕಷ್ಟು ನಿರ್ದೇಶನಗಳನ್ನು ನೀಡಿದರೂ ಅಧಿಕಾರಿಗಳು ಪಾಲಿಸುತ್ತಿಲ್ಲ. ಅಗತ್ಯಬಿದ್ದರೆ, ಈ ಭಾಗದ ಶಾಸಕರನ್ನು ಹೊಣೆಯಾಗಿಸಿ ಕಾನೂನು ಹೋರಾಟ ನಡೆಸಲಿದ್ದೇವೆ

– **ಜಗದೀಶ್ ರಡ್ಡಿ,**
ವರ್ತೂರು ಕೆರೆ ಸಂರಕ್ಷಣೆ ಬಗ್ಗೆ ಎನ್‌ಜಿಟಿಯಲ್ಲಿ ಅರ್ಜಿ ಹಾಕಿದವರು

ನಾನು ಜಗತ್ತಿನ ಎಂಟು ಅದ್ಭುತಗಳನ್ನು ನೋಡಿದ್ದೇನೆ. ಈಗ ಕೆರೆಗೆ ಬೆಂಕಿ ಹೊತ್ತಿಕೊಂಡಿರುವುದು 9ನೇ ಅದ್ಭುತ.

– **ಅರವಿಂದ ಲಿಂಬಾವಳಿ,** ಶಾಸಕ

ಕೆರೆಗಳ ಸಂರಕ್ಷಣೆ ರಾಜ್ಯ ಸರ್ಕಾರದ ಕರ್ತವ್ಯ. ಆದರೆ, ಅದು ಕೆರೆಗಳ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ. ಕೆರೆಗೆ ₹ 30 ಕೋಟಿ ಖರ್ಚು ಮಾಡಿರುವುದಾಗಿ ಹೇಳುತ್ತಿದ್ದಾರೆ. ಅದರಿಂದ ಅಭಿವೃದ್ಧಿ ಎಲ್ಲಾಯಿತು? ಅಷ್ಟು ಹಣ ಎಲ್ಲಿ ಹೋಯಿತು ಎಂಬುದೇ ಗೊತ್ತಿಲ್ಲ.

– **ಪಿ.ಸಿ.ಮೋಹನ್,** ಸಂಸದ